ಮಾಡೋಕೂ ಪುಣ್ಯ ಮಾಡಿ ಹುಟ್ಟಬೇಕಾಕತಿ. ಏನೋ ತೋಡಿ ದಿವಸ್ ಅವಕಾಸ ಸಿಕ್ಕದೆ ಹೆಣಗಾಡೋದಪ್ಪ' ಎಂದು ಒಬ್ಬರಿಗೊಬ್ಬರು ಸಮಾಧಾನ ಹೇಳಿಕೊಂಡ ಪೊಲೀಸ್ ಠಾಣೆಯ ಸಿಬ್ಬಂದಿಯದೀಗ ರಾಗ ಬದಲಾಗಿದೆ. 'ಅಂಬಾ' ಎಂಬ ಕೂಗು ಒನ್ ಬೈ ಒನ್ ಶುರು ಹಚ್ಚಿಕೊಂಡರೆ ಮೈಪರಚಿಕೊಂಡವರಂತೆ ವಿಲಿವಿಲಿ. ಇನ್ನು ಸೆಗಣಿ ಗಂಜಲ ವಾಸನೆಗೆ ಅದರ ಗಲೀಜಿಗೆ 'ಗೊಂಯ್' ಎನ್ನುವ ಸೊಳ್ಳೆಗಳ ಹಾವಳಿಗೆ ಎಲ್ಲಿ ಡೆಂಗಿ, ಚಿಕುನ್‌ಗುನ್ಯ, ಮಲೇರಿಯಾ ಬಂದು ವಕ್ಕರಿಸೀತೋ ಎಂದು ಗಾಬರಿ ಇದ್ದು ಠಾಣೆಗೆ ಬರಲೂ, ಡ್ಯೂಟಿ ಮಾಡಲೂ ಕನಿಷ್ಠ ನಿದ್ದೆ ಮಾಡಲೂ ರಗ್ಗಡ ಭೀತಿ ಆವರಿಸಿಕೊಂಡ್ಯದ. ಮೊಬ್ಬಳ್ಳಿ ಗ್ರಾಮಾಂತರ ಪೊಲೀಸ್ ಠಾಣೆ ದನದ ಕೊಟ್ಟಿಗೆಯಾಗಿ ರೂಪಾಂತರ ಪಡೆಯುತ್ತಿರುವುದನ್ನು ನೋಡಲಾರದೆ ಸೂಕ್ತ ಕ್ರಮ ತೆಗೆದುಕೊಳ್ಳಲೂ ಆಗದೆ ಠಾಣೆಯ ಇನ್‌ಸ್ಪೆಕ್ಟರ್ ಮಾದೇವಯ್ಯನ ತಬೀಯತ್ ಕೆಟ್ಟದ. 'ಇದರಾಗೆ ಒಂದು ದಿನ ಏನಾರ ನಮ್ಮ ಗ್ರಾಚಾರ ಕೆಟ್ಟು 'ಫನಾ' ಆತೋ ಹಿಂದೂ ಜಪತಪ ಸೇನೆಯವರು ದೊಡ್ಡ ಪ್ರೊಸಶನ್ ತಂದು ಸ್ಟ್ರೈಕ್ ಮಾಡಿ ನಮ್ಮಗುಳ್ಳ ಸಸ್ಪೆಂಡ್ ಮಾಡಿಸಿಬಿಡ್ತಾರೆ ಸಾರ್' ಅಂತ ಪೇದೆ ಶಾಸ್ತ್ರಿ ಬೇರೆ ಹೆದರಿಸ್ಲಿಕ್ ಹತ್ತಾನೆ. ಎಸ್.ಐ.ಗೋ ಬುದ್ಧಿಯೇ ಓಡುತ್ತಿಲ್ಲ. ಅದು ಇರೋ ಬಗ್ಗೆಯೇ ಸಹೋದ್ಯೋಗಿಗಳಲ್ಲಿ ಅಪಾರ ಅನುಮಾನವೂ ಉಂಟು.

ಮೊಬ್ಬಳ್ಳಿ ಅಂಬೋ ಪುಟ್ಟ ಗ್ರಾಮದ ದೊಡ್ಡ ಗೌಡರು ಗ್ರಾಮಪಂಚಾಯ್ತಿ ಅಧ್ಯಕ್ಷರಾದ ಮೇಲೆ ಊರಿಗೊಂದು ಪೊಲೀಸ್ ಠಾಣೆ ಗಿಟ್ಟಿಸಿದ್ದಾರೆ. ಹಳ್ಳಿಯಲ್ಲಿ ಪುಂಡಪೋಕರಿಗಳ ಕಾಟ ಹೆಚ್ಚಿದಂತೆಲ್ಲ, ದೌಲತ್ತು ತೋರಲು, ತಮಗಾಗದವರನ್ನು ಬೆದರಿಸಲು ಗೌಡರಿಗೊಂದು ಠಾಣೆಯ ಅವಶ್ಯ ಇತ್ತು. ಒಂದಿಷ್ಟು ಪುಂಡಾಟ ಮಾಡೋರಿದ್ದರೆ ಅದು ವಿರೋಧ ಪಕ್ಷದವರ ತುಕಡಿಗಳಂತಿರುವ ಹಿಂದೂ ಜಪ ತಪ ಸೇನಾದವರೇ ಎಂಬ ಗುಮಾನಿ ಗೌಡರಲ್ಲಿದೆ. ಆದರೆ ಅದರಿಂದ ಗೌಡರಿಗೇನು ಅಂತಹ ಬಾಧೆ ಉಂಟಾಗಿಲ್ಲ. ಅವರೇನು ನಾಸ್ತಿಕರೂ ಅಲ್ಲ. ವಿಚಾರವಾದ ಪ್ರಗತಿಪರತೆಯೆಲ್ಲಾ ಅವರಿಗೆ ಅಪರಿಚಿತ. ಮಾರಮ್ಮನ ಉತ್ಸವಕ್ಕೆ ಮಾದಾರರಿಗೆ ಕಾಸಿನ ಕುಮ್ಮಕ್ಕು ಕೊಟ್ಟಂತೆ, ಹಿಂ.ಜ.ತ.ಸೇ.ಯವರ ಗಣಪತಿ ಉತ್ಸವಕ್ಕೂ ಕಾಸು ಕೊಡ್ತಾರೆ. ಸ್ವತಃ ಭಾಗವಹಿಸಿಯೂ ಬಿಡೋದ್ರಿಂದ ನೊ ಗದ್ದಲ ಗಲಾಟೆ. ಹಳ್ಳೀಲಿ ಗಲಾಟೆ ನಡದ್ರೆ ಗೌಡರ ಪಂಚಾತ್ಗೆ ಕಟ್ಟೆ ಮೇಲೆ ಎಲ್ಲಾ ಕೇಸ್ ಕಲಾಸ್. ಹಿಂಗಾಗಿ ಗೌಡರ ಮೆಹರಬಾನಿ ಮೇಲೆ ಪೊಲೀಸ್ ಠಾಣೆ ಇದ್ದೂ ಇಲ್ಲದಂತಿದ್ದು ಆರಾಮಾಗಿ ಸ್ಯಾಲರಿ ಪಡೆಯುತ್ತಾ ಪಾಡಾಗಿದ್ದು ಬಿಟ್ಟಿತ್ತು. ವಾರಕ್ಕೊಮ್ಮೆ ಗೌಡರ ಮನೇಲಿ ಬಾಡೂಟ, ತೀರ್ಥಸೇವನೆ. ದಿಕ್ಕಿಲ್ಲದ ಪರದೇಶಿ ಹೆಣ್ಣುಮಕ್ಕಳನ್ನು ಗೌಡರೂ ಎಸ್.ಐ. ಸೇರಿಯೇ ಶೇರ್ ಮಾಡ್ಕೋತಾ ಐಷಾರಾಮಿಯಾಗಿದ್ದು, ಎಸ್.ಐ. ಪಾಲಿಗೆ ಗೌಡರೇ ಸ್ವತಃ ಎಸ್.ಪಿ. ಕಮೀಷನರ್ ಇತ್ಯಾದಿ ಇತ್ಯಾದಿ. ಜೀವನವೇನು ಕೊಚ್ಚೆ ನೀರಲ್ಲ. ಹರಿವ ಹೊಳೆಯೆಂದು ಭಾಸವಾಗಿದ್ದು ಎಸ್.ಐ.ಗೆ ಇತ್ತಿತ್ಲಾಗಷ್ಟೆ. ಅದಕ್ಕೂ ಹಿಂ.ಜ.ತ.ಸೇ.ಯವರು ಮಾಡಿದ ಸಾಹಸವೇ ಇವರ ಪಾಲಿಗೆ ಉಪದ್ರವವಾಗಿದೆ.

ಎರಡು ಲಾರಿಗಳಲ್ಲಿ ದನಗಳನ್ನು ತುಂಬಿ ಹೈವೇನಲ್ಲಿ ಸಾಗಿಸಲಾಗುತ್ತಿದೆಯೆಂಬ ಅರೆಬರೆ ಸುದ್ದಿ ತಿಳಿದ ಸೇನಾದಲ್ಲಿನ ಪಡ್ಡೆ ಹುಡುಗರು ಮೊಬ್ಬಳ್ಳಿಯಿಂದ ಕೇವಲ ಕಿ.ಮೀ. ದೂರದಲ್ಲಿರುವ ಹೈವೇನಲ್ಲಿ ರಾತ್ರೋರಾತ್ರಿ ಬೀಡುಬಿಟ್ಟರು. ಬೆಳಗಾಗ ಹತ್ತಿದಾಗ ಸುಳ್ಳು ಸುದ್ದಿ ಕೇಳಿ ಬೆಪ್ಪರಾದೆವೇನೋ ಅಂದು ಮರುಕಪಡುವಾಗಲೇ ಮೊಬ್ಬಗತ್ತಲಲ್ಲಿ ಎರಡು ಲಾರಿಗಳು ಕಂಡವು. ಸೇನಾಪಡ್ಡೆಗಳು ಸಾಲಾಗಿ ಮೊದಲೇ ಕಲ್ಲುದುಂಡಿಯಿಟ್ಟಿದ್ದರು ಈಗ ಓಡಿ ಅಡ್ಡಗಟ್ಟಿದರು. ಡ್ರೈವರು, ಕ್ಲೀನರ್ ಅನ್ನು ಹಿಡಿದು ಬಡಿದು ಬಂಧಿಸಿದ ನಂತರ ಲಾರಿ ಪರಿಶೀಲಿಸಿದರು. ಎರಡು